**ವಿರಾಜಪೇಟೆಯ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ**

**ಸಿಸಿಃನಂಃ 1060/2024**

**ಪಿಡಬ್ಲೂಃ1**

**ದಿನಾಂಕಃ 19.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಎನ್.ಕೆ.ಎಂ. ವಕೀಲರಿಂದಃ**

1. ನನ್ನ ಹೆಸರು ಜಿ.ಸಿ. ಜೊಯಪ್ಪ. ನಾನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಸಾಕ್ಷಿಯನ್ನು ನುಡಿಯಲು ಸೊಸೈಟಿಯಿಂದ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ದಿಃ 16.02.2017 ರಂದು ಆರೋಪಿಗೆ ಸಾಲವನ್ನು ನೀಡಿರುತ್ತೇವೆ. ಆರೋಪಿಯು ಸಾಲ ಪಡೆಯುವ ಸಂಧರ್ಭದಲ್ಲಿ ಸಾಲದ ಅರ್ಜಿ, ಆಧಾರ ಕಾರ್ಡ ನ ಪ್ರತಿ ನೀಡಿರುತ್ತಾರೆ ಮತ್ತು 2 ಜನ ಜಾಮೀನುದಾರರು ಸಾಲದ ಭದ್ರತೆಗಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿಯು ಮುಂದುವರಿದು ಆರೋಪಿಯು ಪ್ರೋನೋಟ್ ನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಚೆಕ್ ನ್ನು ಸಾಲ ಪಡೆಯುವ ಸಂಧರ್ಭದಲ್ಲಿ ನೀಡಿರುವುದಿಲ್ಲ. ಸಾಲವನ್ನು ಮರುಪಾವತಿ ಮಾಡುವ ಸಂಧರ್ಬದಲ್ಲಿ ಆರೋಪಿಯು ದಿಃ 18.09.2024 ರಂದು ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು ಚೆಕ್ ನಲ್ಲಿ ಹಣವನ್ನು ಬರೆದುಕೊಳ್ಳಲು ಹೇಳಿರುವುದರಿಂದ ಹಣವನ್ನು ಬರೆದುಕೊಂಡಿರುತ್ತೇವೆ. ಆರೋಪಿ ಕಡೆಯಿಂದ ಖಾಲಿ ಚೆಕ್ ನ್ನು ಅವರಿಗೆ ಬೇದರಿಕೆಯನ್ನು ನೀಡಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

2. ಆರೋಪಿಯು ಸ್ವ ಇಚ್ಛೆಯಿಂದ ಸಾಲ ಮರು ಪಾವತಿ ಮಾಡಲು ನಿಪಿ-2 ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 18.02.2018 ರಂದು ಆರೋಪಿಯು ಸಾಲ ಮರು ಪಾವತಿ ಮಾಡಬೇಕಾಗಿರುತ್ತದೆ. ಆರೋಪಿಯು ಸಾಲ ಪಡೆದುಕೊಂಡ ದಿನದಿಂದ ದಿಃ 18.02.2018 ರವರೆಗೆ ರೂ. 8,500/- ಹಣವನ್ನು ಮಾತ್ರ ಕಟ್ಟಿರುತ್ತಾರೆ. ದಿಃ 18.02.2018 ರ ನಂತರ ಸಹ ಆರೋಪಿಯು ಸಾಲವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-13 ರಂತೆ ಆರೋಪಿಗೆ ಸೇರಿದ ಸಾಲದ ಖಾತೆಯ ವಿವರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

3. ದಿಃ 18.09.2024 ರಂದು ನಿಪಿ-2 ನ್ನು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ದಿಃ 18.10.2024 ರಂದು ಆರೋಪಿಗೆ ವಕೀಲರ ಮುಖಾಂತರ ನೋಟಿಸನ್ನು ಕಳುಹಿಸಿರಬಹುದು.

**ಪಾಟೀಸವಾಲುಃ ಮುಕ್ತಾಯ**

**ಮರು ವಿಚಾರಣೆ ಇಲ್ಲ.**

**ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇ**

**ಸಹಿ/-**
**ಪ್ರದೀಪ ಪೋತದಾರ**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ವಿರಾಜಪೇಟೆ.**